

# ಜನಸಂಖ್ಯಾ ನಿಯಂತ್ರಣ!

ಅನಕ್ಷರಸ್ಥರೇ ಹೆಚ್ಚಾಗಿದ್ದ ಆ ಪ್ರದೇಶದ ಜನಸಂಖ್ಯೆ ಹೆಚ್ಚಾಗುತ್ತಲೇ ಇತ್ತು. ಜನಸಂಖ್ಯಾ ನಿಯಂತ್ರಣದ ಏನೆಲ್ಲ ಕ್ರಮಗಳನ್ನು ಕೈಗೊಂಡರೂ ಯಾವುದರಿಂದಲೂ ಏನೂ ಪ್ರಯೋಜನವಾಗಿರಲಿಲ್ಲ. ಯೋಚನೆಗೊಳಗಾದ ಕುಟುಂಬ ಕಲ್ಯಾಣ ಇಲಾಖೆಯು, ಏನಾದರೂ ತುರ್ತು ಯೋಜನೆ ಹಾಕಿಕೊಳ್ಳದಿದ್ದರೆ ಪರಿಸ್ಥಿತಿ ಕೈಮೀರಿ ಹೋಗುತ್ತದೆಯೆಂದು ಚಿಂತಿಸಿ ಆ ಪ್ರದೇಶದ ಪ್ರತಿ ಮನೆಯ ಗಂಡಸರಿಗೂ ದಿನಕ್ಕೆ ಐದರಂತೆ ನಿರೋಧ್‌ಗಳನ್ನು ಪೂರೈಸುವ ನಿರ್ಧಾರ ತೆಗೆದುಕೊಂಡಿತು. ಬರಿ ಅಷ್ಟೇ ಅಲ್ಲ, ನಿರೋಧ್‌ಅನ್ನು ಉಪಯೋಗಿಸುವ ಸರಿಯಾದ ಕ್ರಮವನ್ನು ಅವರಿಗೆ ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿಕೊಡಬೇಕೆನ್ನುವ ತೀರ್ಮಾನವನ್ನೂ ಮಾಡಿತು. ಈ ಯೋಜನೆ ಎರಡು ವರ್ಷ ನಿರಂತರ ನಡೆಯಬೇಕು ಹಾಗೂ ಎರಡು ವರ್ಷಗಳ ನಂತರ ಅದರ ಪರಿಣಾಮದ ಸಮೀಕ್ಷೆ ನಡೆಸಬೇಕೆನ್ನುವುದೂ ಆ ತೀರ್ಮಾನದ ಮುಖ್ಯ ಭಾಗವಾಗಿತ್ತು.

ಯೋಜನೆಯ ಪರಿಣಮಕಾರಿ ಜಾರಿಗಾಗಿ ನಿಯುಕ್ತಿಗೊಂಡ ಕಾರ್ಯಕರ್ತರು ನಿರೋಧ್‌ಗಳ